Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದ.)

ಸಂಪುಟ 30 ಸಂಚಿಕೆ 244 | ಮಂಗಳವಾರ 27—5—47 | ಬಿಡಿ ಪ್ರತಿ 3 ಪೈ

ಲಂಡ್ಕ ಕಡೆ ನಿಮ್ಮ ದೃಷ್ಟಿ ಏಕೆ ? ಭಾರತ ಸ್ವಾತಂತ್ರ್ಯ ನಿಮ್ಮ ಹಸ್ತದಲ್ಲೇ ಇದೆ !

ನವದೆಹಲಿ, ಮೆ 25 — ಈ ದಿವಸದ ಪ್ರಾರ್ಥನಾ ಸಭೆಯಲ್ಲಿ, ಗಾಂಧೀಜಿ ಇತ್ತ ಭಾಷಣದಲ್ಲಿ ' ಪ್ರತಿಯೊಬ್ಬನೂ ಲಾರ್ಡ್ ಮೌಂಟ್ ಬೇಟನ್ನರು ಏನು ತರಬಹುದು ಎಂದು ಲಂಡ್ಕ ಕಡೆ ನೋಡುತ್ತಿದ್ದಾನೆ. ಪ್ರಜೆಗಳು ತಮ್ಮ ಸ್ವಂತ ಭವಿಷ್ಯಕ್ಕಾಗಿ ಲಂಡ್ಕ ಕಡೆ ನೋಡುವುದು ವಿಷಾದ. ಸ್ವಾತಂತ್ರ್ಯವು ನಿಮ್ಮ ಹಸ್ತದಲ್ಲೇ ಇದೆ ' ಎಂದರು.

——

ಶಿವಮೊಗ್ಗಾ ಸಮ್ಮೇಳನ

ಸ್ವಂ. ಸು. ತಂತಿ] ಶಿವಮೊಗ್ಗ ಮೇ 27

ತಾ|| 23 ರ ಬೆಳಿಗೆ ಪಂಸ್ಥಾನದ ಪಂಡಿತರ ಸಮ್ಮೇಳನವು ಶ್ರೀ ದ್ವಾರಕಾ ಜಗದ್ಗುರುಗಳವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಅವರ ಬಿಡಾರದಿಂದ ಸಮ್ಮೇಳನದ ಸ್ಥಳಕ್ಕೆ ಭಾರಿ ಮೆರವಣಿಗೆಯಿಂದ ರಾಜ ಬೀದಿಗಳಲ್ಲಿ ಕರೆ ತರಲ್ಪಟ್ಟರು. ಸಂಸ್ಥಾನದ ಗೃಹಮಂತ್ರಿ ಶ್ರೀ ಶೇಷಾದ್ರಿಗಳವರು ಸಮ್ಮೇಳನ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಭಾರತದ ಎಲ್ಲಾ ಕಡೆಗಳಿಂದ ಬಂದಿದ್ದ ಸಂದೇತಗಳು ಓದಲಾಯಿತು. ಅಧ್ಯಕ್ಷರು ಭಾರತ ಸಂಸ್ಕೃತಿ ಘನತೆ ಮುಂತಾದುವನ್ನು ವಿವರಿಸಿ, ಪಂಡಿತರ ಕರ್ತವ್ಯ ವಿಚಾರ ಅಡಕಮಾಡಿ ಅಮೋಘ ಭಾಷಣ ಮಾಡಿದರು. ಪ್ರಮುಖ ಪಂಡಿತರನೇಕರ ಭಾಷಣಾನಂತರ ಕೆಲವು ಠರಾವ್ಗಳು ಮಂಜೂರಾದ ನಂತರ ಸಮ್ಮೇಳನ ಪರಿಸಮಾಪ್ತಿಯಾಯಿತು.

ಅಖಿಲ ಕರ್ನಾಟಕ ಜ್ಯೋತಿಷ್ಯ ಸಮ್ಮೇಳನವು ವೈಭವವಾಗಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಮತ್ತು ಹಲವು ಪ್ರಖ್ಯಾತ ಜ್ಯೋತಿಷ್ಯರ ಭಾಷಣಗಳಾದ ನಂತರ ಶ್ರೀ ದ್ವಾರಕಾ ಜಗದ್ಗುರುಗಳು ಒಹಳ ಸ್ವಾರಸ್ಯವಾದ ಭಾಷಣ ಮಾಡಿದರು. ಕೆಲ ಮುಖ್ಯ ಸಮಸ್ಯೆಗಳನ್ನು ಪರಿಹರಿಸಿ ಹರಿ ಕೀರ್ತನದೊಂದಿಗೆ ಸಮ್ಮೇಳನ ಪರಿಸಮಾಪ್ತವಾಯಿತು.

ಈ ದಿನ ಅಗಮ ಸಮ್ಮೇಳನವು ಶ್ರೀ ದ್ವಾರಕಾ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ನಡೆಯುವುದು.

ಸನ್ಯಾಸಿಗಳ ದಂಡಗಳನ್ನು ವಾಪ್ಸು ಕೊಡಲಾಯಿತು

ಪ್ರಜಾರಂಕ—ರಾಜಾ ಎಸ್ ಗುರುರಾಜಾ ಚಾರ್ಯ. ಅಖಿಲ ಕರ್ನಾಟಕ ಸನಾತನಿಗಳ ಸಂಘ, ಮಂತ್ರಾಲಯ.

ವೈಸ್‌ರಾಯರವರ ವಿಶೇಷ ಅಪ್ಪಣೆ ಮೇರೆಗೆ ಶ್ರೀ ಸ್ವಾಮಿ ಕಾಪಾಶ್ರಜೀ ಮೊದಲಾದವರಿಂದ ಕಿತ್ತುಕ್ಕೊಂಡಿದ್ದ ದಂಡಗಳನ್ನು ಕ್ಷಮಾಯಾಚನಾ ಪೂರ್ವಕವಾಗಿ ವಾಪ್ಸು ಕೊಡಲಾಗಿದೆಯೆಂದು ತಿಳಿಯ ಬಂದಿದೆ.

ಶ್ರೀ ಜಾನಕೀನವಮೀದಿನ್ನ ಲಾಹೋರ್ ಜೈಲಿನಲ್ಲಿ ಶ್ರೀ ಸ್ವಾಮೀಜಿಯವರು ಧರ್ಮವೀರರನ್ನುಳಗುಂಡು ಭಜನೆ ನಡೆಸಿ ಭಾಷಣ ಮಾಡಿದರು. ಭಾಷಣವನ್ನು ಕೇಳಿ ಕಾರಾಗಾರಾಧಿಕಾರಿಗಳೂ ಪ್ರೇಮಾಶ್ರುಸುರಿಸಿದರು.

ಲಾಹೋರ್ 8—5—47

ಶ್ರೀ ಸ್ವಾಮಿಗಳವರ ಮತ್ತು ಧರ್ಮವೀರರ ವಿಷಯದಲ್ಲಿ ಇಲ್ಲಿನ ಕಾರಾಗಾರಾಧಿಕಾರಿಗಳು ಮರ್ಯಾದೆಯಿಂದ ವರ್ತಿಸುತ್ತಿದ್ದಾರೆ. ಶ್ರೀ ಸ್ವಾಮೀಜಿಯವರ ಆಸನ, ಸ್ನಾನ, ಪೂಜಾದಿಗಳಿಗೆ ಸರಿಯಾದ ವ್ಯವಸ್ಥೆ ಮಾಡಲಾಗಿದೆ. ಸ್ನಾನಾದಿಗಳಿಗೆ ಭಾವಿಯ ನೀರನ್ನು ಶುದ್ಧರಾದ ಸನಾತನಿಗಳಿಂದ ವದಗಿಸಲಾಗುತ್ತಿದೆ ಸ್ಪೃಶ್ಯಾ ಸ್ಪೃಶ್ಯ ವಿವೇಕವೂ ಸರಿಯಾಗಿದೆ ಎಂದು ತಿಳಿಯ ಬಂದಿದೆ.

ಪತ್ರಿಕೆಗಳ ಮೇಲೆ ಗದಾ ಪ್ರಹಾರ !

ಧರ್ಮಯುದ್ಧ ಸಮಾಚಾರವನ್ನು ಪ್ರಕಟಿಸಕೂಡದೆಂದು ದೆಹಲಿಯ ಪತ್ರಿಕೆಗಳಿಗ ಅಪ್ಪಣೆ ಕೊಡಲಾಗಿದೆ. ಅಷ್ಟೇ ಅಲ್ಲದೆ ಧರ್ಮ ಸಂಘದ ಪ್ರಮುಖ ದಿನ ಪತ್ರಿಕೆಯಾದ ' ಸನ್ಮಾರ್ಗ ' ದ ಮೇಲೂ ನಿರ್ಬಂಧ ಹಾಕಿ ಶೀಘ್ರ ಜಾತಿ ಕೇಳಲಾಗಿದೆ. ಇದು ಶುದ್ಧ ಅನ್ಯಾಯ ಪತ್ರಿಕೆಗಳ ಸ್ವಾತಂತ್ರ್ಯ ಹರಣವೆಂದು ಕೂಗು ಎದ್ದಿದೆ.

ಯುಕ್ತ ಪ್ರಾಂತೀಯ ಸರಕಾರವು ಧರ್ಮ ಸಂಘ ಮತ್ತು ಅದರ ಶಾಖೆಗಳು ಅಕ್ರಮ ಕೂಟವೆಂದು ಸಾರಲು ಇಚ್ಛೆ ಪಟ್ಟಿದೆಯೆಂದೂ, ಧರ್ಮ ಸಂಬಂಧವಾದ ಸಭೆಗಳು ಭಾಷಣಗಳ ಮೇಲೆ ನಿರ್ಬಂಧ ಹಾಕಲು ಯೋಚಿಸಿದೆ ಎಂದೂ ಸನ್ಮಾರ್ಗ ಪತ್ರಿಕೆಯು ತಿಳಿಸುತ್ತದೆ.

ಸುದ್ದಿಗಳು ಸಕಾಲಕ್ಕೆ ಬರುತ್ತಿಲ್ಲವೆಂತು ಸರ್ಕಾರವು ಬರುವ ಸುದ್ದಿಗಳ ಮೇಲೂ ಕತ್ತರಿ ಪ್ರಯೋಗ ಮಾಡುತ್ತಿದೆ. ಯಾದರೂ ನಾವು ಕನ್ನಡಿಗರಿಗೆ ವಿಶೇಷ ಶ್ರಮ ವಹಿಸಿ ಸಾಧ್ಯವಾದಷ್ಟು ಸತ್ಯ ಸಮಾಚಾರಗಳನ್ನು ಜಾಗ್ರತೆ ಕೊಡುವ ಏರ್ಪಾಟು ಮಾಡುತ್ತೇವೆ. ರಾ. ಶ್ರೀ. ಗು.

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು

ತಾ|| 25-5-47 ರಿಂದ ಕಿಕ್ಕಿರಿದ ನೇ 4 ವಾರ

ನಾವು ಇಬ್ಬರು

(ತಮಿಳು)

ತಾರಾಗಣ : * ಟಿ.ಆರ್. ಮಹಾಲಿಂಗಂ * ಬಿ.ಆರ್. ಪಂತಲು * ಸಾರಂಗಪಾಣಿ * ಟಿ. ಯಂ. ಜಯಲಕ್ಷ್ಮಿ * ಬೇಬಿ ಕಮಲ

ಪ್ರತಿದಿನ 2 ಆಟಗಳು

ಶನಿವಾರ ಮತ್ತು ಭಾನುವಾರಗಳಲ್ಲಿ ೩ - ೩೦ ಕ್ಕೆ ಮ್ಯಾಟ್ನಿ ಉಂಟು

ಭಾರತಸೇನೆ ವಿಭಜನೆ ಅನಿವಾರ್ಯ

ನವದೆಹಲಿ ಮೆ 25—ವಿಭಜಿಸಲ್ಪಟ್ಟ ಭಾರತವು ಭಾರತ ಶಸ್ತ್ರಾಸ್ತ್ರ ಸಡೆಗಳ ವಿಭಜನೆಯನ್ನು ಹೊಂದಿರಲೇಬೇಕಾದದ್ದು ಅನಿವಾರ್ಯ. ವಿಭಜನೆ ನಡೆಯುವುದು ಯಾವ ಭಾಗದ ಅಸಕ್ತಿಯಿಂದಲೂ ಅಲ್ಲ, ಎಂದು ಕೇಂದ್ರ ಸರಕಾರದ ರಕ್ಷಣಾ ಮಂತ್ರಿ ಬಲದೇವ ಸಿಂಗ್ರು ಹೇಳಿದ್ದಾರೆ.

ಪಾಕೀಸ್ತಾನ — ಅಟ್ಲಿಗೆ ಮನವಿ ಅರ್ಪಣೆ

ಲಂಡ್ಕ, ಮೆ 25 — ಬಂಗಾಳ ಪಂಜಾಬು ವಿಭಜನೆ ಇಲ್ಲದೆ ಪಾಕೀಸ್ತಾನ ಕೇಳಿಕೆ ಮನವಿಯನ್ನು ಬ್ರಿಟಿಷ್ ಮುಸ್ಲಿಂ ಲೀಗು ಈ ದಿನದ ಪ್ರಧಾನಿ ಅಟ್ಲಿಗೆ ಅರ್ಪಿಸಿತು. ದಕ್ಷಿಣೋತ್ತರ ಪಾಕೀಸ್ತಾನ ಪ್ರದೇಶದ್ವಾರಂ ಜಗತ್ಯ ವೆಂದು ಆ ಮನವಿಯಲ್ಲಿ ಒರಯಲಾಗಿದೆ

ಪ್ರಪಂಚದಲ್ಲಿ ಕಮ್ಯುನಿಷ್ಟರು

ಪ್ರಪಂಚದಲ್ಲಿಯ ಒಟ್ಟು ಕಮ್ಯೂನಿಸ್ಟರ ಸಂಖ್ಯೆ 17 ಮಿಲಿಯ. ಇವರೆಲ್ಲರೂ 56 ದೇಶಗಳಲ್ಲಿ ಹರಡಿಕೊಂಡಿದ್ದಾರೆ. ರಷ್ಯಾದಲ್ಲಿ 60 ಲಕ್ಷ ಮಂದಿ, ಇಟಲಿಯಲ್ಲಿ 22 ಲಕ್ಷಗಳು, ಅಮೇರಿಕಾದಲ್ಲಿ 74 ಸಾವಿರ, ಬ್ರಿಟನ್ನಿನಲ್ಲಿ 43 ಸಾವಿರ.

ಬಾಲ ಸೇವಕಿ

ಎಸ್ ಎಸ್. ಕೃಷ್ಣ, ಜ್ಯೂಪಿಟರ್ ಪಿಕ್ಚರ್ಸ್‌ನವರು ತಯಾರಿಸಲಿರುವ ' ಬಾಲ ಸೇವಕಿ ' ಚಿತ್ರದ ಆರಂಭೋತ್ಸವದ ಅಧ್ಯಕ್ಷತೆಯನ್ನು ವಹಿಸುವರು.

ಕಲ್ಕತ್ತೆಯ ಪರಿಸ್ಥಿತಿ

108 ಡಿಗ್ರಿಗಳ ಬಿಸಲು, ಕಾಲರ, ಮುಷ್ಕರಗಳು, ಲೀಗ. ಮಂತ್ರಿವರ್ಗ, ಭಾರತ ದೇಶದಲ್ಲಿಯ ಇತರ ರಾಷ್ಟ್ರಗಳಿಗಿಂತ ಆಹಾರ ಪದಾರ್ಥಗಳ ಬೆಲೆಗಳು ಹೆಚ್ಚು, ಮನುಷ್ಯರ ಪ್ರಾಣವು ಅಗ್ಗ ಇದು ಭಾರತ ದೇಶದ ಪಟ್ಟಣಗಳೆಲ್ಲಕ್ಕಿಂತ ದೊಡ್ಡ ಪಟ್ಟಣವಾದ ಕಲ್ಕತ್ತಾ ನಗರದ ಪರಿಸ್ಥಿತಿ

ಬಹಿರಂಗ ಬೀದಿಗಳಲ್ಲಿ ನಡೆಯುತ್ತಿದ್ದರೆ ಯಾವಾಗ ಕತ್ತಿಯು ಬಂದು ಮೇಲೆ ಬೀಳುವದೋ ಎಂಬ ಭಯ. ಪ್ರತಿಯೊಬ್ಬರ ಮನಸ್ಸಿನಲ್ಲಿ ಪಾಕಿಸ್ತಾನ ಹಿಂದೂಸ್ತಾನ ಅಭಿಸ್ರಾಯವು ಏರ್ಪಟ್ಟಿದೆ. ಸಿಕ್ಕ ಟಾಕ್ಸೀ ಡ್ರೈವರರು ಮುಸ್ಲಿಂರು ಹೆಚ್ಚಾಗಿರುವ ಸ್ಥಳಕ್ಕೆ ಬರುವುದಿಲ್ಲವೆನ್ನುತ್ತಾನೆ. ಪತಾಣನು ಹಿಂದೂಗಳು ಮೆಜಾರಿಟಿಯಾಗಿರುವ ಬಾಲೀ ಗಂಜಿಗೆ ತನ್ನ ಗಾಡಿಯನ್ನು ಬಾಡಿಗೆಗೆ ಹೊಡೆಯುವದಿಲ್ಲವೆನ್ನುತ್ತಾನೆ.

ಫೆರೋಅಲಾಯಿಸಿ ಕೆಲಸಗಾರರ ಸಂಘ

ಫೆಡರೇಷನ್ನಿಗೆ ಸೇರಲು ನಿರ್ಧಾರ

ನೇಲ್ಕಂಡ ಸಂಘದ ಕಾರ್ಯ ನಿರ್ವಾಹಕ ಮಂಡಲಿಯ ಸಭೆಯು ಸಯ್ಯಾಜಿರಾವ್ ರಸ್ತೆಯಲ್ಲಿರುವ ಏಜೆನ್ಸಿಸ್ ಕಾರ್ಯಾಲಯದಲ್ಲಿ ನಿನ್ನೆ ದಿನ ಸೇರಿತ್ತು. ಶ್ರೀ ಹೆಚ್, ಎಸ್. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಸ್ಟೇಟ್ ಫೆಡರೇಷನ್ನಿನ ಫಿಲಿಯೇಷನ್ ಸಮಿತಿ ಸದಸ್ಯರಾದ ಶ್ರೀ ಎ. ರಾಮಣ್ಣನವರು ವಿಶೇಷ ಆಹ್ವಾನದ ಮೇಲೆ ಹಾಜರಿದ್ದು ಫೆಡರೇಷನ್ನಿನ ಉದ್ದಿಶ್ಯಗಳನ್ನು ವಿವರಿಸಿದ ನಂತರ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದವು

1) ಸಂಘವನ್ನು ಮೈಸೂರು ಸ್ಟೇಟ್ ಫೆಡರೇಷನ್ನಿಗೆ ಅಫಿಲಿಯೇಟ್ ಮಾಡಿಸಬೇಕೆಂದು ತೀರ್ಮಾನಿಸಲಾಯ್ತು.

2) 20-4-47 ರಲ್ಲಿ ಅಂಗೀಕೃತವಾದ ನಿರ್ಣಯಗಳಿಗೆ ಅಡಳಿತ ಮಂಡಲಿಯಿಂದ ಉತ್ತರ ಬಾರದಿರುವುದರಿಂದ ಆ ನಿರ್ಣಯಗಳನ್ನು ಛೇರ್‌ಮನ್‌ರವರಿಗೆ ಕಳುಹಿಸತಕ್ಕದೆಂದು ತೀರ್ಮಾನಿಸಲಾಯ್ತು.

3) ಸಂಘಕ್ಕೆ ಶೀಘ್ರದಲ್ಲಿಯೇ ಆಫೀಸ್ ತೆರೆಯಬೇಕೆಂದು ಅದರ ಬಾಡಿಗೆಯನ್ನು ಕಂಪೆನಿಯವರು ಕೊಡುವಂತೆ ಕೆಳತಕ್ಕದೆಂದು ತೀರ್ಮಾನಿಸಲಾಯ್ತು.

M

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ

No. R 8-291/43-44 Date. 20-5-47

ನೋಟಿಫಿಕೇಷನ್

ಮೈಸೂರು ಸಿಟಿ ಮುನಿಸಿಪಲ್ ಮಾರ್ಕೆಟ್‌ಗಳಲ್ಲಿರುವ ಅಂಗಡಿಗಳ ಬಾಡಿಗೆದಾರರುಗಳಿಗೆ ಈ ವಿಷಾಲ್ಯ ತಿಳಿಯಪಡಿಸುವುದೇನೆಂದರೆ - ಹಾಲಿ ಜಾರಿಯಲ್ಲಿರುವ ಅಂಗಡಿಗಳ ಬಾಡಿಗೆ ಮೊಬಲಗಿನ ದರವು ಅನೇಕ ವರ್ಷಗಳಿಂದಾ ಬದ್ಲಾವಣೆ ಆಗದೆ ಇರುವುದರಿಂದಲೂ - ಮಾರ್ಕೆಟ್‌ಗಳ ರಿಪೇರಿ ವಗೈರೆ ಕೆಲಸಗಳ ವಿಷ್ಟು ಶಿಬ್ಬಂದಿ ಖರ್ಚು ದಿನೇ ದಿನೇ ಜಾಸ್ತಿಯಾಗುತ್ತಾ ಇರುವುದರಿಂದಲೂ ಮತ್ತು ಈಗಿನ ಕಾಲಸ್ಥಿತಿಗೆ ತಕ್ಕಂತೆ ಬಾಡಿಗೆ ಮೊಬಲಗಿನ ದರವನ್ನು ನಿರ್ಧರಿಸಬೇಕಾಗಿರುವುದರಿಂದಲೂ ಸಹಾ - ಜಾಲ್ತಿ ಮಾಹೆ ತಾರೀಖು 16 ರಲ್ಲಿ ಸಿಟಿ ಮುನಿಸಿಪಾಲಿಟಿಯ ಮ್ಯಾನೇಜಿಂಗ್ ಕಮಿಟಿಯವರು ಹಾಲಿ ಜಾರಿಯಲ್ಲಿರುವ ಬಾಡಿಗೆ ದರಗಳನ್ನು ಜಾಸ್ತಿ ಮಾಡಬೇಕಾಗಿದ್ದಾ -- ಆ ರೀತಿ ಜಾಸ್ತಿಯಾದ ದರದಲ್ಲಿ ಬಾಡಿಗೆ ಮೊಬಲಗನ್ನು 1947 ನೇ ಜೂಲೈ ಮಾಹೆ ವಂದನೇ ತಾರೀಕು ಲಾಗಾಯಿತು ವಸೂಲ್ ಮಾಡಬೇಕಾಗಿ ತೀರ್ಮಾನ ಮಾಡಿರುತ್ತಾರೆ. ಪ್ರತಿ ಅಂಗಡಿಗೂ, ಹಾಲಿ ಇರುವ ಮತ್ತು ಜಾಸ್ತಿ ಮಾಡಿರುವ ಮೊಬಲಗನ್ನು ಆಯಾಯ ಅಂಗಡಿ ಬಾಡಿಗೆದಾರರುಗಳಿಗೆ ಅಲಾಹಿದಾ ತಿಳಿಸಲಾಗುತ್ತೆ.

(sd). R. Ramachandra Rao Bhombore,
President,
City Municipal Council,
Mysore.

M

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋವಂಪಾರದ ಪಂಚಿಕೆ
ವಾರ್ಷಿಕಚಂದಾ
ಪಂಸ್ಥೆಳಕ್ಕೆ ಅಂಜೆವೆಚ್ಚಸೇರಿ 1-12-0

Edited, Printed and Published by M. S Krishna Rao at the Satyavadi Press Chamaraj Agrahar, Mysore.

SHAKTI
SUDHA
A Superb TONIC

At Opera
6 ನೇ ವಾರ

ಟಿ. ಎಸ್. ಬಾಲಯ್ಯ,
ತಪಮಣಿದೇವಿ, ಮಾಲತಿ,
ರಾಮಚಂದ್ರ ನಟಿಸಿರುವ
ರಾ ಜ ಕು ಮಾ ರಿ
(ತ ಮಿ ಳು)

ಲಂಡನ್ ಭೂಗರ್ಭ ರೈಲ್ವೆ ಒಡಾವಣೆ ಪ್ರಾರಂಭವನ್ನು ಬ್ರಿಟಿಷ್ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ನೆರವೇರಿಸುತ್ತಿರುವರು